ಮಂತ್ರಾಲಯಕ್ಕೋ ತಿರುಪತಿಗೋ ಹೋಗಿದ್ದೆ ಎನ್ನುತ್ತಿದ್ದ. ಅಂಥ ದೈವ ಭಕ್ತನೇನು ಅವನಲ್ಲ. ಸುಳ್ಳು ಹೇಳುತ್ತಿದ್ದಾನೋ ನಿಜ ಹೇಳುತ್ತಿದ್ದಾನೋ ಎನ್ನುವುದೂ ಗೊತ್ತಾಗುತ್ತಿರಲಿಲ್ಲ. ಹಾಗಂತ ಅವನಿಗೆ ಹೆಂಗಸಿನ ಸಹವಾಸ ಇರಲಿಲ್ಲ. ಗಿರವಿ ಇಟ್ಟ ಒಡವೆಗಳನ್ನು ಬಿಡಿಸಿಕೊಳ್ಳಲಾರದಷ್ಟು ನೋವು ಅಷ್ಟು ಹೊತ್ತಿಗೆ ಅವನ ಮುಖದಲ್ಲಿ ಅಡಗಿರುತ್ತಿತ್ತು. ಸರಿಯಾದ ವೈದ್ಯರಿಗೆ ತೋರಿಸಿ ಔಷಧ, ಪಥ್ಯ ಮಾಡಿದ್ದರೆ ಅವನಿಗಿರುವ ನಿಗೂಢ ಕಾಯಿಲೆಯ ವರದಿ ಸಿಗುತ್ತಿತ್ತು. ಇದನ್ನೆಲ್ಲಾ ಮಾಡುವವರು ಯಾರು? ಕುಸುಮ ಈ ವಿಷಯದಲ್ಲಿ ಮಹಾಮೌನಿಯಾಗಿ ಬಿಡುತ್ತಿದ್ದಳು. ಅವಳಿಗೊಂದು ಮಗು ಇತ್ತು. ಕೆಲಸಕ್ಕೆ ಬಾರದ ಮಗು.

ನಮ್ಮ ಬಡಾವಣೆಗೆ ಅವಳು ಬಾಡಿಗೆಗೆ ಬಂದಾಗ ಅದಕ್ಕೆ ಐದು ವರ್ಷ ಇರಬಹುದು. ನನ್ನೂರಿನವಳಾದ ಅವಳು ಅದು ಹ್ಯಾಗೋ ನನ್ನ ಸ್ನೇಹ ಬಯಸಿ ಬಂದಳು. ನಾನೂ ಏಕೋ ಅವಳನ್ನು ನನ್ನ ಸೋದರಿ ಏನೋ ಎಂಬಂತೆ ಕಂಡೆ. ಈಗ ಅವಳ ಮಗುವಿನ ವಿಷಯಕ್ಕೆ ಬರೋಣ. ಪಾಪ! ಆ ಮಗುವಿಗೆ ಮೂಳೆಯೇ ಬೆಳೆದಿರಲಿಲ್ಲವಂತೆ. ಯಾರಾದರು ಹತ್ತಿರ ಹೋದರೆ ಕಣ್ಣುಗಳನ್ನು ಅರಳಿಸಿ ನೋಡುವುದನ್ನು ಬಿಟ್ಟರೆ ಮಾಂಸದ ಮೂಟೆಯಂತೆ ಮಲಗಿರುತ್ತಿತ್ತು. ಕೈಕಾಲುಗಳಲ್ಲಿ ಚಲನವಿರಲಿಲ್ಲ. ಅಕ್ಕಪಕ್ಕ ಹೊರಳಿ ಮಲಗಲು ಅದರಿಂದ ಆಗುತ್ತಿರಲಿಲ್ಲ. ಮಲಗಿಸಿದರೂ ದಡಾರನೆ ಅಂಗಾತ ಹೊರಳಿ ಬಿಡುತ್ತಿತ್ತು. ಹಾಗೆ ದಿನವಿಡೀ ಅಂಗಾತ ಮಲಗಿಕೊಂಡರೆ ಹಾಸಿಗೆ ಹುಣ್ಣು ಮೈಗೆ ಹತ್ತಿ ನರಳಿದರೇನು ಗತಿ ಎಂದು ಕುಸುಮಾ ಆಗೀಗ ಮಗುವನ್ನು ಪಕ್ಕಕ್ಕೆ ಹೊರಳಿಸಿ ದಿಂಬು ಇಡುತ್ತಿದ್ದಳು. ದಿಂಬಿಟ್ಟರೂ ಕೆಲವೊಮ್ಮೆ ಹೊರಳಿ ಮತ್ತೆ ಅಂಗಾತ ಮಲಗಿ ಬಿಡುತ್ತಿತ್ತು. ಹಸಿವಾದಾಗ ಬಾಯಿ ತೆರೆದು ವಿಕಾರವಾಗಿ ಅರಚಿಕೊಳ್ಳುತ್ತಿತ್ತು. ಅದು ಬಾಯಿ ತೆಗೆದರೆ ಒಂದು ಇಡೀಕಡುಬು ಬಾಯಿಗೆ ತೂರಿಸಬಹುದೇನೋ ಅಷ್ಟು ದೊಡ್ಡ ಬಾಯಿ. ನಾನು ಅವಳ ಮನೆಗೆ ಹೋದಾಗಲೆಲ್ಲ ಅದು ಬಾಯಿ ತೆರೆಯುವುದನ್ನು ನೋಡಿ ಕಂಗಾಲಾಗುತ್ತಿದ್ದೆ; ಇದೆಂತಹ ರಕ್ಕಸ ಬಾಯಿಯಪ್ಪ ಎಂದುಕೊಳ್ಳುತ್ತಿದ್ದೆ. ಕುಸುಮಾಗೆ ಅದರ ಚಾಕರಿ ಮಾಡುವುದಕ್ಕೆ ಏನೇನೂ ಬೇಸರವಿಲ್ಲ. ಅದಕ್ಕೊಂದು ಪ್ರೀತಿಯ ಹೆಸರಿಟ್ಟಿದ್ದಳು ಕುಸುಮಾ, ಮುನ್ನಾ ಎಂದು. ಮುನ್ನಾ ಎಂದು ಕರೆದರೂ ಅದಕ್ಕೇನು ತಿಳಿಯುತ್ತಿರಲಿಲ್ಲ. ಪ್ರತಿಸ್ಪಂದನೆಯೇ ಇಲ್ಲದ ಆ ಮಾಂಸದ ಮುದ್ದೆಯನ್ನು ಅದೆಷ್ಟು ಪ್ರೀತಿಸುತ್ತಿದ್ದಳೆಂದರೆ ನನಗಂತು ಅದನ್ನು ನೋಡುತ್ತಿದ್ದರೆ ಕಣ್ಣಲ್ಲಿ ನೀರಿಳಿದು ನನ್ನ ಕುಪ್ಪಸವನ್ನೆಲ್ಲಾ ತೋಯ್ಸಿ ಬಿಡುತ್ತಿತ್ತು.

'ಅದ್ಯಾಕೆ ಅಳ್ತೀಯ ಹೇಮಾ, ನಾನೇ ಯಾವತ್ತೂ ಅತ್ತೋಲ್ಲ. ನನ್ನ ಮುನ್ನ ನನಗೆ ಹುಟ್ಟದೆ ಹೋಗಿದ್ದರೆ ಇಂಥ ಗಂಡನನ್ನು ಕಟ್ಟಿಕೊಂಡು ನಾನೇನು ಮಾಡಬೇಕಿತ್ತು ಹೇಳು. ಮುನ್ನಾಳ ಸೇವೆಯಲ್ಲಿ ನನ್ನನ್ನೇ ನಾನು ಮರೆತು ಬಿಡುತ್ತೇನೆ. ಬೇರೆ ಯಾವುದೂ ನನ್ನ ತಲೆಗೆ ಹೋಗುವುದಿಲ್ಲ. ಗಂಡ ಹೀಗಿದ್ದಾನಲ್ಲ ಎನ್ನುವ ವಿಷಯವೇ ನನ್ನ ತಲೆಗೆ ಬರುವುದಿಲ್ಲ. ಮಗಳ ಸೇವೆಯಲ್ಲಿ ತನ್ಮಯಳಾಗಿ ಬಿಡುತ್ತೇನೆ. ನನ್ನ ಗಂಡ ಕೆಲಸ ಮಾಡಿದರೆ ಮಾಡಿದರು, ಇಲ್ಲದಿದ್ದರೆ ಇಲ್ಲ. ಆರೋಗ್ಯವಾಗಿದ್ದಾರಲ್ಲ ಅಷ್ಟು ಸಾಕು. ಸಂಸಾರದ ಖರ್ಚಿಗೆ ತಂದುಕೊಟ್ಟರೆ ಕೊಟ್ಟರು. ಇಲ್ಲದಿದ್ದರೆ ಇಲ್ಲ. ಮಗುವಿಗೆ ಹಾಲು ಕುಡಿಸುವುದಕ್ಕಾದರೂ ಹಣಬೇಡವೇ? ನನ್ನ ಮುದ್ದು ಮುನ್ನ ನನ್ನ ಸಮಕ್ಕೂ ಊಟ ಮಾಡುತ್ತಾಳೆ. ಮಲಗಿದ್ದಲ್ಲೇ ಮಲಗಿದ್ದರೂ ಅವಳಿಗೆ ಸರಿಯಾಗೇ ಆಹಾರ ಬೇಕು. ನಾನು ಉಪವಾಸ ಇದ್ದರೂ ಸರಿಯೇ ನನ್ನ ಮುನ್ನ ಬದುಕಬೇಕು' ಎನ್ನುತ್ತಿದ್ದಳು ಕುಸುಮಾ. ಅವನಿಲ್ಲದ ದಿನಗಳಲ್ಲಿ ಮನೆಯಲ್ಲಿ ಏನೇನು ಸಾಮಗ್ರಿಗಳಿಲ್ಲದೆ